## ದ.ಕ. 8 ಕ್ಷೇತ್ರಗಳಲ್ಲಿ 60 ಅಭ್ಯರ್ಥಿಗಳು । ವಿಧಾನಸಭೆ ಪ್ರವೇಶಿಸುವವರು ಯಾರು?

# ಇಂದು ಫಲಿತಾಂಶ, ಲೆಕ್ಕಾಚಾರಕ್ಕೆ ತೆರೆ

ವಿಜಯವಾಣಿ ಸುದ್ದಿಜಾಲ ಮಂಗಳೂರು

ದ.ಕ. ಜಿಲ್ಲೆಯ 8 ಕ್ಷೇತ್ರಗಳಲ್ಲಿ 13,76,500 ಮತದಾರರು ಅಭ್ಯರ್ಥಿಗಳ ಭವಿಷ್ಯ ನಿರ್ಧರಿಸಿದ್ದು, ಮೇ 13ರಂದು ತೀರ್ಪು ಪ್ರಕಟವಾದ ಬಳಿಕ 60ರಲ್ಲಿ ವಿಧಾನಸಭೆ ಪ್ರವೇಶಿಸುವ ಅದೃಷ್ಟ ಪಡೆಯುವ ಎಂಟು ಮಂದಿ ಯಾರು ಎಂಬುದು ಗೊತ್ತಾಗಲಿದೆ.

ಕಾಂಗ್ರೆಸ್, ಬಿಜೆಪಿ ಮತ್ತು ಆಮ್ ಆದ್ಮಿ ಪಾರ್ಟಿ ಎಲ್ಲ ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿದೆ. ಜೆಡಿಎಸ್-7, ಎಸ್‌ಡಿಪಿಐ-5, ಕೆಆರ್‌ಎಸ್-5, ಹಿಂದು ಮಹಾಸಭಾ-2, ಉತ್ತಮ ಪ್ರಜಾಕೀಯ ಪಕ್ಷ- 2, ಹಿಂದುಸ್ತಾನ್ ಜನತಾ ಪಾರ್ಟಿ ಸೆಕ್ಯುಲರ್, ಸರ್ವೋದಯ ಕರ್ನಾಟಕ ಪಕ್ಷ, ತುಳುವೆರೆ ಪಕ್ಷ, ಕಲ್ಯಾಣ ರಾಜ್ಯ ಪ್ರಗತಿ ಪಕ್ಷ ಮತ್ತು ಜನಹಿತ ಪಕ್ಷ ತಲಾ 1 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. 10 ಪಕ್ಷೇತರರು ಕಣದಲ್ಲಿದ್ದಾರೆ.

### ಹೊಸಮುಖಗಳು

ಕಾಂಗ್ರೆಸ್‌ನಿಂದ ಮಿಥುನ್ ರೈ, ರಕ್ಷಿತ್ ಶಿವರಾಂ, ಇನಾಯತ್ ಅಲಿ, ಬಿ.ಕೃಷ್ಣಪ್ಪ, ಅಶೋಕ್ ಕುಮಾರ್ ರೈ, ಬಿಜೆಪಿಯಿಂದ ಆಶಾ ತಿಮ್ಮಪ್ಪ, ಸತೀಶ್ ಕುಂಪಲ, ಭಾಗೀರಥಿ ಮುರುಳ್ಯ ಮೊದಲ ಬಾರಿಗೆ ಸ್ಪರ್ಧಿಸುತ್ತಿರುವವರು. ಈ ಪೈಕಿ ಮಿಥುನ್ ರೈ 2019ರ ಲೋಕಸಭಾ ಚುನಾವಣೆಯಲ್ಲಿ ದ.ಕ. ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋಲು ಅನುಭವಿಸಿದವರು.



ಸುರತ್ಕಲ್‌ನ ಎನ್‌ಐಟಿಕೆಯಲ್ಲಿ ಮತಎಣಿಕೆಗೆ ಮಾಡಿರುವ ವ್ಯವಸ್ಥೆ.

### ಮಾಡು-ಮಡಿ ಹೋರಾಟ

ಜಿಲ್ಲೆಯಲ್ಲಿ ಆಡಳಿತ ಪಕ್ಷದ 7 ಶಾಸಕರಿದ್ದು, ಈ ಕ್ಷೇತ್ರಗಳನ್ನು ಉಳಿಸಿಕೊಳ್ಳುವುದು ಬಿಜೆಪಿಗೆ ಪ್ರತಿಷ್ಠೆಯಾಗಿದೆ. ಸಂಘ ಪರಿವಾರದ ಭದ್ರಕೋಟೆ ಎಂದೇ ಬಿಂಬಿತವಾಗಿರುವ ಜಿಲ್ಲೆಯಲ್ಲಿ ಮತ್ತೆ ಪ್ರಾಬಲ್ಯ ಮೆರೆಯಲು ಬಿಜೆಪಿ ಇನ್ನಿಲ್ಲದ ಪ್ರಯತ್ನ ನಡೆಸಿದೆ. ಸ್ವತಃ ಪ್ರಧಾನಿ ನರೇಂದ್ರ ಮೋದಿ ಅವರು ಮೂಲ್ಕಿಗೆ ಆಗಮಿಸಿ ಭರ್ಜರಿ ಪ್ರಚಾರ ಭಾಷಣ ಮಾಡಿದ್ದರೆ, ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ , ಪ್ರಿಯಾಂಕಾ ಗಾಂಧಿ ಜಿಲ್ಲೆಗೆ ಆಗಮಿಸಿ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಂಡಿದ್ದರು. 2013ರ ಚುನಾವಣೆಯಲ್ಲಿ ಜಿಲ್ಲೆಯ 7 ಕ್ಷೇತ್ರಗಳನ್ನು ಗೆದ್ದಿದ್ದ ಕಾಂಗ್ರೆಸ್ ಮತ್ತೆ ಎಲ್ಲ ಕ್ಷೇತ್ರಗಳನ್ನು ವಶಪಡಿಸಿಕೊಳ್ಳಲು ಶತ ಪ್ರಯತ್ನ ನಡೆಸಿದೆ.

### ಕಳೆದ 5 ಚುನಾವಣೆಗಳ ಕ್ಷೇತ್ರವಾರು ಪಕ್ಷಗಳ ಜಯ

| ವಿಧಾನಸಭಾ ಕ್ಷೇತ್ರ | 1999 | 2004 | 2008 | 2013 | 2018 |
|---|---|---|---|---|---|
| ಬೆಳ್ತಂಗಡಿ | ಬಿಜೆಪಿ | ಬಿಜೆಪಿ | ಕಾಂಗ್ರೆಸ್ | ಕಾಂಗ್ರೆಸ್ | ಬಿಜೆಪಿ |
| ಮೂಡುಬಿದಿರೆ | ಕಾಂಗ್ರೆಸ್ | ಕಾಂಗ್ರೆಸ್ | ಕಾಂಗ್ರೆಸ್ | ಕಾಂಗ್ರೆಸ್ | ಬಿಜೆಪಿ |
| ಮಂಗಳೂರು ಉತ್ತರ | ಕಾಂಗ್ರೆಸ್ | ಬಿಜೆಪಿ | ಬಿಜೆಪಿ | ಕಾಂಗ್ರೆಸ್ | ಬಿಜೆಪಿ |
| ಮಂಗಳೂರು ದಕ್ಷಿಣ | ಬಿಜೆಪಿ | ಬಿಜೆಪಿ | ಬಿಜೆಪಿ | ಕಾಂಗ್ರೆಸ್ | ಬಿಜೆಪಿ |
| ಮಂಗಳೂರು | ಕಾಂಗ್ರೆಸ್ | ಕಾಂಗ್ರೆಸ್ | ಕಾಂಗ್ರೆಸ್ | ಕಾಂಗ್ರೆಸ್ | ಕಾಂಗ್ರೆಸ್ |
| ಬಂಟ್ವಾಳ | ಕಾಂಗ್ರೆಸ್ | ಬಿಜೆಪಿ | ಕಾಂಗ್ರೆಸ್ | ಕಾಂಗ್ರೆಸ್ | ಬಿಜೆಪಿ |
| ಪುತ್ತೂರು | ಬಿಜೆಪಿ | ಬಿಜೆಪಿ | ಬಿಜೆಪಿ | ಕಾಂಗ್ರೆಸ್ | ಬಿಜೆಪಿ |
| ಸುಳ್ಯ | ಬಿಜೆಪಿ | ಬಿಜೆಪಿ | ಬಿಜೆಪಿ | ಬಿಜೆಪಿ | ಬಿಜೆಪಿ |

### ರಮಾನಾಥ ರೈ 9ನೇ ಬಾರಿ ಸ್ಪರ್ಧೆ

2018ರ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಬಿ.ರಮಾನಾಥ ರೈ, ಯು.ಟಿ. ಖಾದರ್ (ಹಾಲಿ ಶಾಸಕ), ಜೆ.ಆರ್.ಲೋಬೊ ಮತ್ತೆ ಕಣದಲ್ಲಿದ್ದಾರೆ. ಬಂಟ್ವಾಳ ಕ್ಷೇತ್ರದಲ್ಲಿ ಬಿ.ರಮಾನಾಥ ರೈ 9ನೇ ಬಾರಿ ಸ್ಪರ್ಧಿಸುತ್ತಿದ್ದಾರೆ. ಈ ಹಿಂದೆ 6 ಬಾರಿ ಜಯ ಗಳಿಸಿರುವ ಅವರು 2 ಬಾರಿ ಪರಾಭವಗೊಂಡಿದ್ದರು. ಮಂಗಳೂರು ಕ್ಷೇತ್ರದಲ್ಲಿ ಸತತ 4 ಜಯ ದಾಖಲಿಸಿರುವ ಯು.ಟಿ.ಖಾದರ್ 5 ಬಾರಿಗೆ ಕಣದಲ್ಲಿದ್ದಾರೆ. ಜೆ.ಆರ್.ಲೋಬೊ ಅವರಿಗೆ ಇದು 3ನೇ ಬಾರಿಯ ಸ್ಪರ್ಧೆ.

## ಬೆಳಗ್ಗೆ 8 ಗಂಟೆಗೆ ಮತ ಎಣಿಕೆ ಆರಂಭ

ಮಂಗಳೂರು: ಸುರತ್ಕಲ್ ಮುಕ್ಕದ ಎನ್‌ಐಟಿಕೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಎಂಟು ವಿಧಾನಸಭಾ ಕ್ಷೇತ್ರಗಳ ಮತ ಎಣಿಕೆ ಮೇ 13ರ ಬೆಳಗ್ಗೆ 8 ಗಂಟೆಗೆ ಆರಂಭವಾಗಲಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ರವಿಕುಮಾರ್ ಎಂ.ಆರ್. ತಿಳಿಸಿದರು.

ಇವಿಎಂ ಮತ್ತು ಅಂಚೆ ಮತಪತ್ರ ಸೇರಿದಂತೆ ಚುನಾವಣಾ ದಾಖಲೆಗಳನ್ನು ಇಡಲಾದ ಭದ್ರತಾ ಕೊಠಡಿಗಳಿರುವ ಮತ ಎಣಿಕೆ ಕೇಂದ್ರದ ಆವರಣದ 100 ಮೀಟರ್ ವ್ಯಾಪ್ತಿಯೊಳಗೆ ಅನಧಿಕೃತ ವ್ಯಕ್ತಿಗಳು ಮತ್ತು ವಾಹನಗಳು ಪ್ರವೇಶಿಸದಂತೆ ತಡೆಬೇಲಿ ನಿರ್ಮಿಸಿ ಭದ್ರತಾ ವಲಯ ಸ್ಥಾಪಿಸಲಾಗಿದೆ. ಮತ ಎಣಿಕೆಯ ಕೇಂದ್ರಕ್ಕೆ ಪ್ರವೇಶದ್ವಾರ ನಿರ್ಮಿಸಿ ಅದನ್ನು ಚುನಾವಣಾ ಅಧಿಕಾರಿ/ ನಿಯೋಜಿತ ಅಧಿಕಾರಿ/ ಸಿಬ್ಬಂದಿ ಹೊಂದಿರುವ ಭಾಚಿತ್ರವಿರುವ ಗುರುತಿನ ಚೀಟಿಯನ್ನು ಪರಿಶೀಲಿಸಿ ಅನುಮತಿಸುವ ಬಗ್ಗೆ ಸ್ಥಳೀಯ ಪೊಲೀಸರನ್ನು ಕರ್ತವ್ಯದಲ್ಲಿರಿಸಲಾಗಿದೆ ಎಂದು ಎನ್‌ಐಟಿಕೆಯಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

### ಅಂಚೆ ಮತಪತ್ರಗಳ ಮತ ಎಣಿಕೆ

ಈ ಬಾರಿ ಹಿರಿಯ ನಾಗರಿಕರು, ಅಶಕ್ತರಿಗೆ ಅಂಚೆ ಮತದಾನದ ಸೌಲಭ್ಯ ಕಲ್ಪಿಸಲಾಗಿದ್ದು, ಒಟ್ಟು 12,313 ಅಂಚೆ ಮತಪತ್ರಗಳು ಸ್ವೀಕೃತವಾಗಿವೆ. 541 ಸೇವಾ ಮತದಾರರಿಗೆ ಅಂಚೆ ಮತಪತ್ರವನ್ನು ಇಟಿಪಿಬಿಎಸ್ ಮೂಲಕ ಕಳುಹಿಸಲಾಗಿತ್ತು. 10,035 ಕರ್ತವ್ಯ ನಿರತ ಸಿಬ್ಬಂದಿಗೆ ಅಂಚೆ ಮತಪತ್ರಗಳನ್ನು ನೀಡಲಾಗಿದ್ದು, ಬೆಳಗ್ಗೆ 8 ಗಂಟೆಯಿಂದ ಎಲ್ಲ ಅಂಚೆ ಮತಪತ್ರಗಳ ಎಣಿಕೆ ಕಾರ್ಯ ನಡೆಯಲಿದೆ. ಇದಾದ 30 ನಿಮಿಷದ ಬಳಿಕ ಇವಿಎಂನಲ್ಲಿ ದಾಖಲಾದ ಮತಗಳ ಎಣಿಕೆ ಆರಂಭಗೊಳ್ಳಲಿದೆ. ಎಣಿಕೆ ಟೇಬಲ್‌ಗೆ ಮತ ಎಣಿಕೆ ಮೇಲ್ವಿಚಾರಕರು, ಸಹಾಯಕ ಸಿಬ್ಬಂದಿ ಮತ್ತು ಮೈಕ್ರೋ ವೀಕ್ಷಕರನ್ನು ನೇಮಿಸಲಾಗಿದೆ ಎಂದರು.

ಭದ್ರತೆಗೆ ರಾಜ್ಯ ಶಸ್ತ್ರಸಜ್ಜಿತ ಪೊಲೀಸ್ ಪಡೆ, ಕೇಂದ್ರ ಶಸ್ತ್ರಸಜ್ಜಿತ ಪೊಲೀಸ್ ಪಡೆಗಳನ್ನು ನಿಯೋಜಿಸಲಾಗಿದೆ. ಮತ ಎಣಿಕೆ ಕೇಂದ್ರದೊಳಗೆ ಮೊಬೈಲ್, ಐಪ್ಯಾಡ್, ಲ್ಯಾಪ್‌ಟಾಪ್ ಸೇರಿದಂತೆ ಇಲೆಕ್ಟ್ರಾನಿಕ್ ಉಪಕರಣ ಮತ್ತು ಆಡಿಯೋ-ವೀಡಿಯೋ ರೆಕಾರ್ಡರ್‌ಗಳನ್ನು ತೆಗೆದುಕೊಂಡು ಹೋಗುವುದನ್ನು ನಿಷೇಧಿಸಲಾಗಿದೆ ಎಂದರು.

Udayavani, Date:13/05/23, p, no-04